ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 23/2019 ಸಿಡಬ್ಲೂಃ 9 ಪಿ ಡಬ್ಲೂಃ 4**

| | |
|---|---|
| ಹೆಸರು | ನಟರಾಜು |
| ತಂದೆಯ ಹೆಸರು | ಮಹೇಶ್ವರಪ್ಪ |
| ವಯಸ್ಸು | 43 ವರ್ಷ |
| ವೃತ್ತಿ | ವಕೀಲರು |
| ವಾಸ | ಚಿತ್ರದುರ್ಗ |

ದಿನಾಂಕಃ 06.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 1 ರಿಂದ 4, 9 ರಿಂದ 22 ರವರ ಪರಿಚಯವಿಲ್ಲ. ಚಾಸಾ 5 ಮತ್ತು 6 ರವರ ಪರಿಚಯವಿದೆ. 1ನೇ ಆರೋಪಿಯ ಪರಿಚಯವಿಲ್ಲ. 2ನೇ ಆರೋಪಿಯ ಪರಿಚಯವಿಲ್ಲ. ಈ ಪ್ರಕರಣದಲ್ಲಿ ಮರಣ ಹೊಂದಿರುವ ವ್ಯಕ್ತಿಯ ಹೆಸರು ಗೊತ್ತಿಲ್ಲ. ದಿಃ 19.10.2018 ರಂದು ಚಾಸಾ 6 ಮತ್ತು 7 ರವರೊಂದಿಗೆ ನಾನು ಶಿವನಸಮುದ್ರಕ್ಕೆ ಹೋಗಿ ನಂತರ ಮೈಸೂರು ಕಡೆಗೆ ಹೋಗಲು ಹೊರಟಿದ್ದೆವು. ನಾವು ಕಾರಿನಲ್ಲಿ ಹೊರಟಿದ್ದು, ನಾವು ಚಿನ್ನನಾಯಕನಹಳ್ಳಿಯ ಹತ್ತಿರ ಬಂದಾಗ ನಾನು ಮಲಗಿದ್ದು, ಯಾವುದೋ ಶಬ್ದ ಕೇಳಿ ಬಂದಿತು. ಎದ್ದು ನೋಡಿದಾಗ ಒಂದು ಬೈಕ್ ನಮ್ಮ ಕಾರಿಗೆ ಬಡಿದಿರುವುದು ತಿಳಿದು ಬಂತು. ನಾವು ಮುಂದೆ ಹೋದೆವು. ಆ ನಂತರ ನನಗೆ ಏನು ಗೊತ್ತಿಲ್ಲ. ನಾವು ಪ್ರಯಾಣಿಸಿದ ಕಾರ್ ನಿಸಾನ್ ಕಾರ್ ಆಗಿದ್ದು, ಅದರ ನೋಂದಣಿ ಸಂಖ್ಯೆ ಗೊತ್ತಿಲ್ಲ. ಸದರಿ ಕಾರ್ ಚಾಸಾ 23 ರವರ ಮಾಲೀಕತ್ವದಲ್ಲಿತ್ತು. ಚಾಸಾ

23 ರವರ ಚಾಸಾ 7 ರವರ ಅಣ್ಣ ಆಗಬೇಕು. ಡಿಕ್ಕಿಯಾದ ನಂತರ ನಾವು ನಮ್ಮ ಪಾಡಿಗೆ ಬಂದಿರುತ್ತೇವೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ನಾನು ಕಾರ್ ನ ಹಿಂದಿನ ಸೀಟ್ ಮಧ್ಯ ಭಾಗದಲ್ಲಿ ಕುಳಿತಿದ್ದೆ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

2. ದಿಃ 19.10.2018 ರಂದು ನಾವು ಪ್ರವಾಸಕ್ಕೆ ಹೋಗಲು ಕೆ ಆರ್ ಪೇಟೆಯ ರಾಘವೇಂದ್ರ ಅಂದರೆ 1ನೇ ಆರೋಪಿಯನ್ನು ಚಾಲಕನಾಗಿ ನೇಮಕ ಮಾಡಿಕೊಂಡು ಮದ್ದೂರು, ಮಳವಳ್ಳಿ, ಶಿವನ ಸಮುದ್ರಕ್ಕೆ ಹೋಗಿ, ತಲಕಾಡು, ಸೋಮನಾಥಪುರ ನೋಡಿಕೊಂಡು ನಂತರ ಮೈಸೂರಿಗೆ ಹೋಗಲು ಬನ್ನೂರು-ಕರಿಘಟ್ಟ ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದೆವು ಎಂದರೆ ಸರಿ. ನಾವು ಕೆಎ-04-ಎಂ ಎನ್ -5574 ನಿಸಾನ್ ಕಾರನ್ನು ಚಾಸಾ 23 ರವರಿಂದ ಪಡೆದಿದ್ದು, ಅದನ್ನು 1ನೇ ಆರೋಪಿ ಚಲಾಯಿಸುತ್ತಿದ್ದ ಎಂದರೆ ಸರಿ. ಸದರಿ 1ನೇ ಆರೋಪಿಯನ್ನು ಚಾಲಕನಾಗಿ ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿ. ನಾವು ಚನ್ನನಾಯಕನಹಳ್ಳಿಯ ಬಳಿ ಸುಮಾರು 3.30 ಗಂಟೆಗೆ ಬಂದಾಗ 1ನೇ ಆರೋಪಿಯು ತನ್ನ ಕಾರನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಎದುರುನಿಂದ ಬರುತ್ತಿದ್ದ ಸ್ಕೂಟರ್ ಗೆ ಅಪಘಾತ ಮಾಡಿದ್ದ ಎಂದರೆ ಸರಿಯಲ್ಲ. ಸಾಕ್ಷಿ ನಾನು ಮಲಗಿದ್ದೆ, ಏನಾಯಿತು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅಪಘಾತ ಪರಿಣಾಮವಾಗಿ ಸ್ಕೂಟರ್ ಸವಾರಿಬ್ಬರಿಗೂ ಪೆಟ್ಟಾಗಿದ್ದು, ಜನರು ಹೊಡೆಯುತ್ತಾರೆ ಎಂಬ ಭಯಕ್ಕೆ ಚಾಲಕ ಕಾರನ್ನು

ನಿಲ್ಲಿಸದೇ ಹೊರಟು ಹೋದ ಎಂದರೆ ಸರಿಯಲ್ಲ. ನಂತರ ಬೈಕ್ ಸವಾರರಿಬ್ಬರು ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿದ್ದು, ಅವರ ಹೆಸರು ರಾಜು ಮತ್ತು ಜಯರಾಮು ಎಂದು ತಿಳಿಯಿತು ಎಂದರೆ ಸರಿಯಲ್ಲ. ಈ ಬಗ್ಗೆ ಕೇಸ್ ದಾಖಲಾಗಿದ್ದು, ದಿಃ 18.12.2018 ರಂದು ನಾನು ಚಾಸಾ 7 ರವರೊಂದಿಗೆ ಪೊಲೀಸ್ ಠಾಣೆಗೆ ಹಾಜರಾಗಿದ್ದು, ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ಮೇಲ್ಕಂಡ ವಿಳಾಸದಲ್ಲಿ ----------------------- ಮತ್ತು ಕಾರನ್ನು ನೋಡಿರುತ್ತೇನೆ. ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ10 ಎಂದು ಗುರುತಿಸಲಾಗಿದೆ. 1ನೇ ಆರೋಪಿಯ ಪರಿಚಯವಿದ್ದು, ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಪರಿಚಯವಿದ್ದು, ಆತ ಅಪಘಾತದ ದಿನ ಕಾರನ್ನು ಅತಿವೇಗ ಹಾಗೂ ಅಜಾಗರೂಜಕತೆಯಿಂದ ಚಲಾಯಿಸಿ ಅಪಘಾತ ಪಡಿಸಿರುತ್ತಾನೆ ಎಂದು ನನಗೆ ತಿಳಿದಿದ್ದರೂ ಸಹ ಆತನಿಗೆ ಸಹಾಯ ಮಾಡುವ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಇಬ್ಬರು ವ್ಯಕ್ತಿಯರು ಮರಣ ಹೊಂದಿದ್ದು, ಅದು 1ನೇ ಆರೋಪಿಯು ಕಾರನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿದ ಕಾರಣ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತಕ್ಕೊಳಗಾದ ದ್ವಿ ಚಕ್ರ ವಾಹನದ ನೋಂದಣಿ ಸಂಖ್ಯೆ ಕೆಎ-55-ಇ-8647 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*